# ಅಮೆರಿಕದ ಮಹಾ ಉಪ್ಪು ಸರೋವರ



ಕ್ಯಾಂಪಸ್ ನೋಟ

■ ಚಿತ್ರ ಬರಹ:
**ಎಸ್. ಆರ್. ದೇವಪ್ರಕಾಶ್**

ಒರೆಗನ್ ರಾಜ್ಯಕ್ಕೆ ಹೋಗಬೇಕಾಗಿದ್ದ ನಾನು ಮಧ್ಯದಲ್ಲಿ ಯೂಟ ರಾಜ್ಯದ ರಾಜಧಾನಿ ಸಾಲ್ಟ್ ಲೇಕ್ ಸಿಟಿ ತಲುಪಿದೆ. ಅಲ್ಲಿ ನನ್ನ ವೈದ್ಯ ನೆಂಟನ ಮನೆಯಲ್ಲಿ ಇಳಿದುಕೊಂಡಿದ್ದೆ. ಎರಡು ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಅವಕಾಶವಾಯಿತು. ಅದರಲ್ಲಿ ಮೊದಲನೆಯದು ಉಪ್ಪು ಸರೋವರ (ಸಾಲ್ಟ್ ಲೇಕ್).

ಸರೋವರದ ಉಪ್ಪಿನ ಅಂಶ ಸಮುದ್ರಕ್ಕಿಂತಲೂ ಹೆಚ್ಚಾಗಿರುವುದರಿಂದ ಏಷ್ಯಾ ಖಂಡದ ಮೃತ್ಯು ಸಾಗರದಂತೆ ಇಲ್ಲಿಯೂ ಯಾರೂ ಮುಳುಗುವುದಿಲ್ಲ! ಇಲ್ಲಿನ ವಿಶೇಷವೆಂದರೆ ಸರೋವರದಲ್ಲಿ ಕೋಟ್ಯಾಂತರ ಸಣ್ಣ ಜೀವಿಗಳನ್ನು ಕಾಣಬಹುದು. ಮೃತ್ಯು ಸಾಗರದಲ್ಲಿ ಯಾವ ಜೀವಿಗಳಿಗೂ ಆಶ್ರಯವಿಲ್ಲ! ಬ್ರೈನ್ ಶ್ರಿಂಪ್ ಜೀವಿಗಳು ಅಂದಾಜು ಒಂದು ಸೆಂಟಿಮೀಟರ್ ಉದ್ದವಿರುತ್ತವೆ. ಪ್ರವಾಸಿಗರನ್ನು ಮಾರ್ಗದರ್ಶಿಗಳು ಸಣ್ಣ ದೋಣಿಗಳಲ್ಲಿ ಸರೋವರದಲ್ಲಿ ಸುತ್ತಾಡಿಸುತ್ತಾರೆ.

ನಮ್ಮನ್ನು ಸುತ್ತಾಡಿಸಿದ ಮಾರ್ಗದರ್ಶಿಯು ಒಂದು ಸಣ್ಣ ಪಾತ್ರೆಯಲ್ಲಿ ಕೆಲವು ಶ್ರಿಂಪ್‌ಗಳನ್ನು ಹಿಡಿದು ಅದರಲ್ಲಿ ಗಂಡನ್ನು ಗುರುತಿಸಲು ಹೇಳಿದ. ಸರಿಯಾದ ಉತ್ತರ ಹೇಳಿದರೆ ಮಾತ್ರ ದೋಣಿಯಿಂದ ಇಳಿದು ಹೋಗಬಹುದು ಎಂದು ಸವಾಲು ಒಡ್ಡಿದ! ಕ್ಷಣ ಕಕ್ಕಾಬಿಕ್ಕಿಯಾದೆ. ನಾಚಿಕೆಯಿಂದ ಚಡಪಡಿಸುತ್ತಿರುವಾಗ ಜತೆಗಿದ್ದ ನನ್ನ ನೆಂಟನ ಪತ್ನಿ 'ಸುಮ್ಮನೆ ಊಹಿಸು, ಇದು ಒಂದು ತಮಾಷೆಯ ಪ್ರಶ್ನೆ' ಎಂದು ಪಿಸುಗುಟ್ಟಿದಳು. ನಾನು ಏನೋ ಒಂದು ಉತ್ತರ ಹೇಳಿದೆ. ನಂತರ ತಿಳಿಯಿತು ಹೆಣ್ಣು ಶ್ರಿಂಪ್ ಸ್ವಲ್ಪ ಉದ್ದವಿರುತ್ತದೆ ಎಂದು. ಇಂತಹ ಸೂಕ್ಷ್ಮದ ವಿಷಯ ಪ್ರಾಣಿಶಾಸ್ತ್ರಜ್ಞನಿಗೆ ಗೊತ್ತಾಗಬಲ್ಲದು; ನನ್ನಂತಹ ಮೆಕ್ಯಾನಿಕಲ್ ಎಂಜಿನಿಯರ್‌ಗೆ ಹೇಗೆ ಸಾಧ್ಯ?

ನಮ್ಮ ಎರಡನೆಯ ಭೇಟಿ ವಿಖ್ಯಾತ ಬ್ರಿಗಾಮ್ ಯಂಗ್ ವಿಶ್ವವಿದ್ಯಾಲಯದ ಕಡೆಗೆ. ಇದು ಕ್ರೈಸ್ತ ಧರ್ಮದ ಒಂದು ವಿಭಿನ್ನ ಶಾಖೆಗೆ ಸಂಬಂಧಿಸಿದ (ಮಾರ್ಮನ್ಸ್) ಅತಿ ದೊಡ್ಡ ವಿಶ್ವವಿದ್ಯಾಲಯ. ಸುಮಾರು 30,000 ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ನಾನಾ ವಿಷಯಗಳಲ್ಲಿ ವ್ಯಾಸಂಗ ನಡೆಸುತ್ತಿದ್ದಾರೆ. ಈ ಕ್ಯಾಂಪಸ್‌ನ ವಿಶೇಷವೆಂದರೆ ಮೈಪೂರಾ ಮುಚ್ಚುವ ಬಟ್ಟೆ ಧರಿಸುವುದು. ಅಮೆರಿಕದಲ್ಲಿ ಬೇಸಿಗೆಯಲ್ಲಿ ತುಂಡು ಚಡ್ಡಿ ಬಟ್ಟೆಯ ಹುಡುಗ ಹುಡುಗಿಯರನ್ನು ಕಾಣುವುದು ಸಾಮಾನ್ಯ. ಆದರೆ ಇಲ್ಲಿ ಅದಕ್ಕೆ ತದ್ವಿರುದ್ಧ. ಬೇಸಿಗೆಯಲ್ಲೂ ಮೈತುಂಬ ಬಟ್ಟೆ ಧರಿಸಬೇಕು.

